ಓ.ಎಸ್. 341/2021
ಪಿ.ಡಬ್ಲ್ಯೂ-1

ದಿನಾಂಕಃ **08.09.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ **1** ರಿಂದ **3** ನೇ ಪ್ರತಿವಾದಿಗಳ ಪರ ಶ್ರೀ ಡಿ.ಸಿ.ಎಸ್. ವಕೀಲರಿಂದಃ

ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನೀವು ಎಲ್ಲಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿರುತ್ತೀರಾ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಸರಿ ಎಂದು ಉತ್ತರಿಸಿ ನಾನು ಮತ್ತು ನನ್ನ ತಮ್ಮ ಸಮ ಭಾಗ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. 2013 ರಲ್ಲಿ ಆದಂತಹ ವಿಭಾಗ ಪತ್ರಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ನನ್ನ ತಾಯಿಗೂ ಸಹ ಪಾಲನ್ನು ನೀಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡು ನಮ್ಮ ಭದ್ರತೆಗಾಗಿ ನಮ್ಮ ಮನೆಯಲ್ಲಿಟ್ಟುಕೊಂಡಿರುತ್ತೇವೆ ಎಂದರೆ ಸರಿ. ಆದರೆ ಸದರಿ ವಿಭಾಗ ಪತ್ರ ನೊಂದಣಿಯಾಗಿರುವುದಿಲ್ಲ ಎಂದರೆ ಸರಿ . ವಿಭಾಗ ಪತ್ರದಂತೆ ನಾವು ಈಗ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿ.

**2.** ಸರ್ವೆ ನಂ. 33/2 ನ್ನು 2013 ರಲ್ಲಿ ಆದಂತಹ ವಿಭಾಗದಲ್ಲಿ ನನ್ನ ತಾಯಿಯ ಪಾಲಿಗೆ ಬಿಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಾಯಿ ತೀರಿಕೊಂಡ ನಂತರ ನಾನು ಮತ್ತು ನನ್ನ ತಮ್ಮ ಸದರಿ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. 2013 ರಲ್ಲಿ ವಿಭಾಗ ಮಾಡಿಕೊಂಡಿದ್ದರೂ ಸಹ ನಾನು 4 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

**3.** ದಾವಾ ಸ್ವತ್ತುಗಳಲ್ಲಿ 2013 ರಲ್ಲಿ ವಿಭಾಗವಾಗಿರುವುದರಿಂದ ಒಟ್ಟು ಕುಟುಂಬದಲ್ಲಿರುವುದಿಲ್ಲ ಎಂದರೆ ಸರಿ. ಈಗಾಗಲೇ ವಿಭಾಗವಾಗಿದ್ದರೂ ಸಹ 1 ರಿಂದ 3 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ನಾನೇ ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆವುಂಟು ಮಾಡುತ್ತಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ